ಆದ್ಯತೆ ಕೊಡೋಣ. ಮುಂದೆ ಬರತಕ್ಕಂತಹ ವರ್ಷಗಳಲ್ಲಿ ಅಂತಹ ಆದ್ಯತೆಗಳಿಗೆ ಗಮನ ಕೊಡಲಾಗುವುದು. ಗ್ರಾಮಸ್ಥರು ಹಣ ಕಟ್ಟಡ ಕೊಡಲಿಕ್ಕೆ ಮುಂದೆ ಬಂದಾಗ ಅವರಿಗೆ ಪ್ರಾಶಸ್ತ್ಯ ಕೊಡತಕ್ಕಂತಹ ವ್ಯವಸ್ಥಿತವಾದ ಪದ್ಧತಿಯನ್ನು ಮುಂದೆ ಬರತಕ್ಕಂತಹ ಹಣಕಾಸು ವರ್ಷದಲ್ಲಿ ಮಾಡುತ್ತೇವೆ. ಮಾನ್ಯ ಸದಸ್ಯರು ದೂರು ನ್ಯಾಯವಾಗಿದೆ. 2 ಕಡೆಯಲ್ಲಿ 88ರಲ್ಲಿ ಹಣ ದೇಣಿಗೆ ಕೊಡಲು ಮುಂದೆ ಬಂದಿದ್ದೇವೆ. ಗ್ರಾಮಸ್ಥರು ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಆದರೂ 50 ಘಟಕಗಳಲ್ಲಿ ಇಲ್ಲಿಗೂ ಕೊಡಬೇಕಾಗಿತ್ತು 92-93ರಲ್ಲಿ ಕೊಡಬೇಕಾಗಿತ್ತು. ಆದರೆ ನಮಗೆ ಕೊಡದೇ ಮಾಡಿದ್ದಾರೆ. ಎಂದು ಹೇಳಿದರು. ಇದಕ್ಕೆ ಸರಕಾರ ದಂಡ ತೆರಬೇಕಾಗುತ್ತದೆ. ಒಂದನ್ನು ಈ ವರ್ಷದಲ್ಲಿ ಮಾಡುತ್ತೇವೆ ಇನ್ನೊಂದು ಬರುವ ವರ್ಷ ಮಾಡುತ್ತೇವೆ.

ನಿಯಮ 334ರ ಮೇರೆಗೆ

Dissolving Elected Board of Halsidnath Sahakari Sugar Factory Nippani.

Sri. Subash Joshi : It is learnt that Government is going to Dissolve Elected Board of Shri Halsidnath Sahakari Sugar Factory Ltd., Nippani for political reasons.

I request the Hon'ble Co-operation Minister to answer whether it is a fact.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷಣಿಯವರೇ ಮಾನ್ಯ ಸಹಕಾಂ ಮಂತ್ರಿಗಳ ಪರವಾಗಿ ಉತ್ತರ ಕೊಡುತ್ತೇನೆ.

ಸರ್ಕಾರವು ಕೇವಲ ರಾಜಕೀಯ ಕಾರಣಕ್ಕಾಗಿ ಯಾವುದೇ ಸಹಕಾರ ಸಂಸ್ಥೆಯ ಆಡಳಿತ ಮಂಡಳಿಯನ್ನು ರದ್ದುಗೊಳಿಸುವುದಿಲ್ಲ. ಆದಾಗ್ಯೂ ಸರ್ಕಾರವು ಯಾವುದೇ ಸಹಕಾರ ಸಂಸ್ಥೆಯಲ್ಲಿ 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅಡಿಯಲ್ಲಿ ರೂಪಿಸಿರತಕ್ಕ ನಿಯಮಗಳು ಹಾಗೂ ಅಂತಹ ಸಂಘಗಳ ಕಾಯ್ದೆ ಅಡಿಯಲ್ಲಿ ರೂಪಿಸಿರತಕ್ಕ ನಿಯಮಗಳು ಹಾಗೂ ಅಂತಹ ಸಂಘಗಳ ಬೈಲಾ ನಿಯಮಗಳನ್ನು ಉಲ್ಲಂಘಿಸಿ ಗುರುತರವಾದ ಅಕ್ರಮಗಳನ್ನು ನಡೆಸಿರುವುದು ಕಂಡು ಬಂದಂಥ ಸಂದರ್ಭದಲ್ಲಿ ಅಂತಹ ಸಂಘದ ಆಡಳಿತ ಮಂಡಳಿಯನ್ನು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 30(1) ಅಥವಾ 30-ಎ ಅಡಿಯಲ್ಲಿ ರದ್ದುಗೊಳಿಸಿ ಸಂಘದ ವ್ಯವಹಾರಗಳನ್ನು ನೋಡಿಕೊಳ್ಳುವ ಸಲುವಾಗಿ ಸಂದರ್ಭಕ್ಕನುಸಾರವಾಗಿ ಆಡಳಿತಾಧಿಕಾರಿಯಾ ವಿಶೇಷಾಧಿಕಾರಿಗಳನ್ನು ನೇಮಕ ಮಾಡುವುದನ್ನು ಪರಿಶೀಲಿಸಬಹುದು.

ಪ್ರಸ್ತುತ ಬೆಳಗಾಂ ಜಿಲ್ಲೆಯ ನಿಪ್ಪಾಣಿಯಲ್ಲಿರುವ ಶ್ರೀ ಹಾಲಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ(ನಿ)ಯ ಚುನಾಯಿತ ಮಂಡಳಿಯನ್ನು ರದ್ದು ಗೊಳಿಸುವ ವಿಚಾರ ಸರ್ಕಾರಕ್ಕಿಲ್ಲ. ಆದಾಗ್ಯೂ ಮೇಲೆ ಹೇಳಿದಂತೆ ಈ ಸಕ್ಕರೆ ಕಾರ್ಖಾನೆಯ ವ್ಯವಹಾರಗಳಲ್ಲಿ ಯಾವುದೇ ಗುರುತರವಾದ ಅಕ್ರಮಗಳು ಕಂಡು ಬಂದಲ್ಲಿ ಸರ್ಕಾರವು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು 1960ರ

ಕರ್ನಾಟಕ ಸಹಕಾರಸಂಘಗಳ ನಿಯಮಾವಳಿ ಇವುಗಳ ಅಡಿಯಲ್ಲಿ ಸಂಘದ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪರಿಶೀಲಿಸುವುದು.

ಹಿರಿಯ ಕೆಲಸ ಪರಿವೀಕ್ಷಕರ ಪದನಾಮವನ್ನು ಜೂನಿಯರ್ ಇಂಜಿನಿಯರ್ ಎಂದು ಬದಲಾವಣೆ ಮಾಡುವುದು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷಣೆಯವರೇ ಮೂರು ವರ್ಷ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ, ಹಿರಿಯ ಕೆಲಸ ಪರಿವೀಕ್ಷಕರನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಬೇಕೆಂದು ಮತ್ತು ಜೇಷ್ಠತಾ ಪಟ್ಟಿಯಲ್ಲಿ ಸೇರಿಸಬೇಕೆಂದು ಸರ್ಕಾರದ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ. 484 ಎಸ್ ಪಿಎಸ್ 85 ಬೆಂಗಳೂರು ದಿನಾಂಕ 12-2-1988ರಲ್ಲಿ ಆದೇಶವಾಗಿರುರವರು, ಸರ್ಕಾರದ ಕಾರ್ಯದರ್ಶಿಯವರು, ಲೋಕೋಪಯೋಗಿ ಮತ್ತು ಕಾಡಾ ಇಲಾಖೆ ಬಹುಮಟ್ಟಿಗೆ ಕಟ್ಟಡ ಬೆಂಗಳೂರು ಇವರಿಗೆ ದಿನಾಂಕ 15.9.1989ರಂದ ಜನಆ: ಸಿ4:ಸಿಇವ: 107:88-89ರಲ್ಲಿ ಪತ್ರ ಬರೆದು ಈ ಕೆಳಕಂಡ ಹಿರಿಯ ಕೆಲಸ ನಿರೀಕ್ಷಕರುಗಳನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಿ, ಆ ಹುದ್ದೆಯಲ್ಲಿ ನಿಯುಕ್ತಿ ಗೊಳಿಸುವ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದ್ದರೂ ಸಹ, ಇದುವರೆಗೂ ತೀರ್ಮಾನ ಕೈಗೊಳ್ಳದೆ ಸದರಿ ಮೂರು ಜನ ಹಿರಿಯ ಕೆಲಸ ನಿರೀಕ್ಷಕರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರಿಪಡಿಸಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ ಎಂದು ತಿಳಿಯ ಬಯಸುತ್ತೇನೆ?

1. ಶ್ರೀ ಹೆಚ್. ಶಾಂತಮಲ್ಲಪ್ಪ, ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ, ಶಿವಮೊಗ್ಗ.

2. ಶ್ರೀ ಇ. ಶ್ರೀನಿವಾಸಮೂರ್ತಿ ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ -ಶಿವಮೊಗ್ಗ.

3. ಶ್ರೀ ಈರೇಗೌಡ ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ -ಹಾಸನ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಸಭಾಧ್ಯಕ್ಷಣೆಯವರೇ,

ಮುಖ್ಯ ಅಭಿಯಂತರರು, ಜನ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರು ತಮ್ಮ ದಿನಾಂಕ :15.4.91ರ ಪತ್ರ ಸಂಖ್ಯೆ : ಜಸಆ:ಸಿ-4:ಪಿವಾಇ: 107:88-89ರ ಪತ್ರದಲ್ಲಿ ಹಿರಿಯ ಕೆಲಸ ನಿರೀಕ್ಷಕರಾದ ಶ್ರೀ ಹೆಚ್. ಶಾಂತಮಲ್ಲಪ್ಪ, ಶ್ರೀ ಆರ್. ಶ್ರೀನಿವಾಸ ಮೂರ್ತಿ ಮತ್ತು ಶ್ರೀ ಈರೇಗೌಡರವರಿಗೆ ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 484 ಎಸ್‌ಪಿಎಸ್ 85 ದಿನಾಂಕ 12.2.88ರ ಪ್ರಕಾರ ಕಿರಿಯ ಇಂಜಿನಿಯರ್‌ಗಳ ವೇತನ ಶ್ರೇಣಿಗೆ ಸಮಾನಾಂತರ ವೇತನವನ್ನು ನೀಡಲಾಗುತ್ತಿದೆಯೆಂದೂ ಆದರೆಈ ಹಿರಿಯ ಕೆಲಸ ನಿರೀಕ್ಷಕರನ್ನು ಕಿರಿಯ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಿ ಆ ಹುದ್ದೆಯಲ್ಲಿ ನಿಯುಕ್ತಿಗೊಳಿಸುವ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಕೋರಿದ್ದರು.

ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ 484 ಎಸ್‌ಪಿಎಸ್ 85 ದಿನಾಂಕ 12.2.88ರ ಆದೇಶದಲ್ಲಿ ಪತ್ರಾಂಕಿತವಲ್ಲದ ಕೆಲಸ ನಿರೀಕ್ಷಕರ (ವರ್ಕ್‌ಇನ್ಸ್‌ಪೆಕ್ಟರ್)